Regd. No. M 1299 SATYAVADI Founded 1917

ಸತ್ಯವಾದಿ

SATYAVADI

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 260 | ಬುಧವಾರ 31—7—46 | ಬಿಡಿ ಪ್ರತಿ 3 ಪೈ

ls Week
A
ಲಭಾ
—
ಹಾ

At Opera
LAVANGI
4 ನೇ ಅಮೋಘ ವಾರ
ಲವಂಗಿ
From 3—8—46
ಭಕ್ತ ಕಲಾತಿ

ಡೆಲ್ಲಿಯಲ್ಲಿ ಮುಷ್ಕರಗಳ ಹಾವಳಿ

ಸುಲಭ ಸರಕಾರ

ಎಲ್ಲೆಲ್ಲಿ ನೋಡಿದರೂ ಜವಾಬ್ದಾರಿ ಸರಕಾರ, ರಾಷ್ಟ್ರೀಯ ಸರಕಾರ, ಆ ಸರಕಾರ, ಈ ಸರಕಾರ, ಎಂದು ಹೇಳಿ ಅಸಾಧ್ಯವಾಗಿ ಕೂಗೆಬ್ಬಿಸುತ್ತಾರೆ. ಯಾವ ಸರಕಾರವೇ ಆಗಿದ್ದರೂ ಅದು ಸುಲಭವಾಗಿರುತ್ತದೆಯೇ ಎಂಬುದನ್ನು ನೋಡಬೇಕು. ಕಮ್ಮಿ ಖರ್ಚಿನಲ್ಲಿ ನಡೆಯಬೇಕು. ಅಷ್ಟಾದರೆ ಸರಕಾರದ ಆಡಳಿತವೆಲ್ಲಾ ಬಹು ಸುಲಭವಾಗುತ್ತದೆ.

ಯಾವ ಕಡೆ ಬೇಕಾದರೂ ನೋಡಿರಿ. 'ಸಂಬಳ ಹೆಚ್ಚು ಮಾಡಿರಿ, ತುಟ್ಟಿ ಭತ್ಯ ಕೊಡಿರಿ, ಬೋನಸ್ ಕೊಡಿರಿ, ಹೆಚ್ಚು ದಿನ ರಜಾ ಕೊಡಿರಿ, ಕೆಲಸ ಕಮ್ಮಿ ಕೊಡಿರಿ' ಎಂದು ಎಲ್ಲೆಲ್ಲಿಯೂ ಗಲಾಟೆಗಳು. ಕೇಳಿದುದನ್ನೆಲ್ಲಾ ಕೊಡಬೇಕು ಇಲ್ಲವಾದರೆ ಮುಷ್ಕರ, ಮೆರವಣಿಗೆ, ಪತ್ರಿಕಾಗ್ರಹ, ಕೂಗು, ಗಲಾಟೆ ದೊಂಬಿ, ಗುಂಡು, ಎಲ್ಲವೂ ಒಂದರ ಹಿಂದೆ ಬಂದು ನಡೆದುಹೋಗುವುದು! ಸುಲಭ ಸರಕಾರ ಮಾಡಿಬಿಟ್ಟರೆ ಇದೊಂದು ಎಲ್ಲಾ ಅಧಿಕಾರಗಳೂ ಆಳುವ ಪಕ್ಷದ ತಲೆಯೇ ಇಲ್ಲ.

ಇದೇನೋ ಹೊಸ ವಿ
ಯಾರೂ ತಿಳಿದುಕೊಳ್
ಹೊಸತು ಯಾವುದೂ
ಳೆಯುದೇ. ಉ
ಇದನ

ಉ ಕೊಡಿ ''ಆಸ್ಪತ್ರೆ ಕೊಡಿ'' ಕೆರೆ ಕಟ್ಟೆ ಮಾಡಿ ಕೊಡಿ' ಎಂದೆಲ್ಲಾ ಕೇಳಬೇಕಾದದ್ದೇ ಇಲ್ಲ. ಸುಲಭ ಸರಕಾರ ಬಂದರೆ ಎಲ್ಲವೂ ತಾನಾಗಿ ಸುಲಭದಲ್ಲಿಯೇ ನಡೆದುಹೋಗ

. ನಮ್ಮ ಸರಕಾರದವರು ಈ
ವನ್ನು ಮೊದಲಾಗಿ ಆಯುವೆ
ಲಾಪೆಯಲ್ಲಿ ಜಾರಿಗೆ ತಂದರು.
ಗಳಲ್ಲೆಲ್ಲಾ ಒಂದೊಂದು ಆಯುರ್ವೇದ ಆಸ್ಪತ್ರೆ ತೆರೆದು ಜನರ ಆರೋಗ್ಯ ರಕ್ಷಣಾ ಕಾರ್ಯವನ್ನು ನಡೆಸಿದರು. ಇದೇನೂ ಕಷ್ಟವೆಂದು ತಿಳಿದುಕೊಳ್ಳಬೇಡಿರಿ, ಬಹು ಸುಲಭವಿದೆ. ಆಯುರ್ವೇದ ಪಂಡಿತರೊಬ್ಬರಿಗೆ ತಿಂಗಳಿಗೆ ಮೂವತ್ತು ನಲವತ್ತು ರೂಪ್ಯಾಗಳನ್ನು ಕೊಟ್ಟರಾಯಿತು. ಆ ಊರಿನ ಜನಗಳ ಆರೋಗ್ಯ ರಕ್ಷಣಾ ಕಾರ್ಯವನ್ನೆಲ್ಲಾ ಆತನೇ ವಹಿಸಿಕೊಳ್ಳುತ್ತಾನೆ. ಮೂಲಿಕೆಗಳನ್ನು ತರುವುದು, ಔಷಧಗಳನ್ನು ತಯಾರಿಸುವುದು, ರೋಗಿಗಳನ್ನು ಉಪಚರಿಸುವುದು ಅವರಿಗೆ ಚಿಕಿತ್ಸೆ ಮಾಡುವುದು, ಇತ್ಯಾದಿ ಎಲ್ಲಾ ಅಧಿಕಾರಗಳೂ ಆತನ ಹಕ್ಕಿನ

ಅಂಚೆ ತಂತಿ ಮುಷ್ಕರವೇ

ಹೊಸದೆಹಲಿ ಜು 29 — ನಾಳೆ ಸಂಜೆಯೊಳಗೆ ಸರಕಾರದವರು ತಮ್ಮ ಬೇಡಿಕೆಗಳನ್ನು ನಡೆಸಿ ಕೊಡದಿದ್ದರೆ, ತಾವು ಅಗಸ್ಟ್ 3 ರಿಂದ ಮುಷ್ಕರ ಹೂಡುವುದಾಗಿ ಅಂಚೆ ಮತ್ತು ತಂತಿ ಫೆಡರೇಷನ್ನಿನವರು ನಿರ್ಧರಿಸಿದ್ದಾರೆ.

ಬಿರುದುಗಳು ಬೇಡ

ಬೊಂಬಾಯಿ ಜು 29 — ಮುಸ್ಲಿಂ ಲೀಗ್ ಕೌನ್ಸಿಲ್ಲಿನಲ್ಲಾದ ಠರಾವಿನಂತೆ ಹಲ ಪ್ರಮುಖ ಮುಸ್ಲಿಂ ಬಿರುದಾಂಕಿತರು ತಮ್ಮ ಬಿರುದುಗಳನ್ನು ತ್ಯಜಿಸಿ ಸನ್ನದ್ದುಗಳನ್ನು ಬ್ರಿಟಿಷ್ ಸರಕಾರಕ್ಕೆ ವಾಪಸ್ ಕಳುಹಿಸಲು ನಿರ್ಧರಿಸಿದರು.

ಭಾರತದ ಅನ್ನ ಪರಿಸ್ಥಿತಿ

ಲಂಡನ್ ಜು 29 — ಕಾಮನ್ಸಿನಲ್ಲಿ ವಿ। ಹಂಡರ್‌ಸನ್ನರು ಭಾರತದ ಅನ್ನ ಪರಿಸ್ಥಿತಿಯು ಇನ್ನೂ ಕಟ್ಟುತರವಾಗಿಯೇ ಇದೆಯೆಂದು ತಿಳಿಸಿದರು.

''ವಿಶ್ವಕರ್ಣಾಟಕ''

ಬೆಂಗಳೂರು ಜು 28 — 'ವಿಶ್ವಕರ್ಣಾಟಕಕ್ಕೆ' ಸರಕಾರದವರು ಕೊಟ್ಟಿರು

ಮುಷ್ಕರ ಹಾವಳಿ

ನವದೆಹಲಿ ಜು 29— ಹಳೇ ಡೆಲ್ಲಿಯ ಮುನಿಸಿಪಲ್ ಕೆಲಸಗಾರರು 3000 ಮಂದಿ ಮುಷ್ಕರ ಹಿಡಿದಿರುವರು — 18 ದಿನದಿಂದ ಅಂಚೆ ಮುಷ್ಕರ ಬಿರುಸಾಗಿದೆ — ಬಿರ್ಲಾ ಮತ್ತು ಜಮುನಾ ಗಿರಣಿಗಳ 5 ಸಾವಿರ ಮಂದಿ ಮುಷ್ಕರ ಬೇರೆ — ಸಾಲದ್ದಕ್ಕೆ ಹಳೆ ಮತ್ತು ಹೊಸ ಡೆಲ್ಲಿಯ ಆಸ್ಪತ್ರೆಗಳ 500 ಮಂದಿ ಕಾಂಪೌಂಡರುಗಳು ಮುಷ್ಕರ ನಡೆಸಲು ಸಿದ್ಧ ಪಡಿಸಿಕೊಳ್ಳುತ್ತಿದ್ದಾರೆ — ಇಷ್ಟರ ಜೊತೆಗೆ ಇಂಪೀರಿಯಲ್ ಬಾಂಕ್ ಕೆಲಸಗಾರರು ಮುಷ್ಕರ ನಡೆಸುವರು.

ಬತ್ತ ಪತ್ತೆ

ಶಿವಮೊಗ್ಗಾದ ಒಂದು ಅಕ್ಕಿ ಗಿರಣಿಯವರು ಕಡಲೇಕಾಯಿ ಹೊಟ್ಟಿನ ರಾಶಿಯಲ್ಲಿ 76 ಮೂಟೆ ಭತ್ತ ಮುಚ್ಚಿಟ್ಟಿದುದು ಪತ್ತೆಯಾಗಿದೆ.

ಚಿನ್ನಗಣಿ ಕಂಪೆನಿ ಪರಿಹಾರ

ಬೆಂಗಳೂರು ಜು 29 — ಗಣಿ ಕಂಪೆನಿಯವರಿಗೆ ಮೊದಲು 5 ತಿಂಗಳಿಗೆ

ಆರ್ಕಾಟು ಮೊದಲಿಯಾರರ ದಿವಾನಗಿರಿ ನಮಗೆ ಬೇಡ

ಶಾರದ ವಿಲಾಸ ಕಾಲೇಜಿನಲ್ಲಿ

ಪ್ರ ಚ ಂ ಡ ಪ್ರ ತಿ ಭ ಟ ನೆ

ಮೈಸೂರು ಜುಲೈ 31 — ಈ ದಿವಸ ಶಾರದ ವಿಲಾಸ ಕಾಲೇಜಿನ ವಿದ್ಯಾರ್ಥಿಗಳು ಆರ್ಕಾಟ ರಾಮಸ್ವಾಮಿ ಮೊದಲಿಯಾರರ ದಿವಾನಗಿರಿ ನೇಮಕದ ಬಗ್ಗೆ ಪ್ರಚಂಡ ಮುಷ್ಕರ ನಡೆಸಿ ತರಗತಿಗಳಿಗೆ ಬಹಿಷ್ಕಾರ ಹಾಕಿದರು. ಶ್ರೀಗಳಾದ ಕೆ ಶ್ರೀಕಂಠಯ್ಯ, ರಾಜಣ್ಣ ಮತ್ತು ಪಿ ಡಿ ಮಧುರಾನಾಥ್‌ರವರುಗಳು ಪ್ರತಿಭಟನಾ ಭಾಷಣವನ್ನು ಮಾಡಿದರು. ಇದರಲ್ಲಿ ಇಂಜನೀಯರಿಂಗ್ ಸ್ಕೂಲ್ ಸಹಾ ಭಾಗಿಯಾಗಿದ್ದಿತು.

ಟಿ. ಎ. ಮಧುರಂ

ಟಿ ಎ. ಮಧುರಂ ಸೋಮವಾರ ಪಿಕ್ಚರ್ಸ್‌ರವರ 'ದೇವದಾಸಿ' ಚಿತ್ರದಲ್ಲಿ ಅಭಿನಯಿಸುವಳೆಂದು ಈ ಮೊದಲು ಪ್ರಕಟವಾಗಿತ್ತಷ್ಟೆ. ಪಕ್ಷಿರಾಜ'ದವ ''ಕನ್ನಿಕಾ' ಇತರ ಎರಡು ಚಿತ್ರಗಳಲ್ಲಿ ಆಕೆ ಅಭಿನಯಿಸುವಳೆಂದು ಇದೀಗ ಗೊತ್ತಾಗಿದೆ ಟಿ ಎ. ಮಧುರಂ ಪುನಃ ಚಲಚಿತ್ರಗಳಲ್ಲಿ ಅಭಿನಯಿಸಲು ಕಾರಣವಾದ ವಿಷಯವೆಂದರೆ, ಮದ್ರಾಸು ಹೈಕೋರ್ಟಿನಲ್ಲಾದ ಎಸ್. ಕೃಷ್ಣರವರ ವೇಲಿನ ಖೂನಿ ಮೊಕದ್ದಮೆಯ ತೀರ್ಮಾನದ ಕುರಿತು ಪ್ರೀವಿ ಕೌನ್ಸಿಲನಲ್ಲಿ ಅಪೀಲಿಗೆ ಸಮ್ಮತಿ ದೊರೆತಿದೆಯಷ್ಟೆ—ಅದಕ್ಕೆ ಬೇಕಾಗುವ ಖರ್ಚಿನ ಹಣ ಸಂಗ್ರಹಿಸಲು ಮಧುರಮ್ಮ ಚಲಚಿತ್ರ ಸೇವೆಗೆ ಇಳಿದಿದಾಗಿದೆ. (ಪ್ರ)

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಅಂಚೆವೆಚ್ಚ ಸೇರಿ 1-12-0

ಅಕ

ಸಾಮಾಜಿಕ

ರ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ವೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

Get Medical Diplomas

At home : — Ayurvedic Homeopathic, Unani, etc Prospectus Free.

Old Indian Medical College
Kotgarh, Simla

For Good Printing

L. N. Press

MYSORE

ಸುಖ ಆರೋಗ್ಯ ಆನಂ



ಜೀ

ಸ್ಟೀಮರ್ ಮಾ

ಹಿಂಗಿನ ಪುಡಿ ಅ

ಈ ಹಿಂಗಿನ ವ್ಯಡಿಯು ಅತ್ಯಂತ ಪರಿಶುದ್ಧವಾದುದು ರಿನದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು ತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂ ಮತ್ತು ಒಂದು ಸಲಂ ಸ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ರೂ. 3-8-0 ಮಾತ್ರ.

ಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ಏವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಶಕ್ತಿಸುಧಾ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ

ವಿಸ್ತಾರವಾದ, ನತಿಸಿರುವ ಮೈಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ

ರಾಜಪುರಂ, ಮೈಸೂರು

TI

ಜೀವನ ಪಥ

ಪ್ರಪಂಚದ ಅನುಜ್ಞೆಯಿಲ್ಲದೆಯೇ ಮನುಷ್ಯನು ಪ್ರಪಂಚದಲ್ಲಿ ಜನಿಸುತ್ತಾನೆ. ಪುನಃ ತನ್ನ ಬಯಕೆಗೆ ವಿರುದ್ಧವಾಗಿಯೇ ಪ್ರಪಂಚವನ್ನು ಬಿಡುತ್ತಾನೆ. ಅತನ ಉದ್ದೇಶಗಳನ್ನು ಪ್ರಪಂಡವು ಸರಿಯಾಗಿ ಗ್ರಹಿಸಲಾರದು. ಬಾಲ್ಯದಲ್ಲಿ ಅವನೊಬ್ಬ ದೇವತೆ. ಯೌವನದಲ್ಲಿ ಅವನೊಬ್ಬ ಮೂರ್ಖ. ಹೆಂಡರು ಮಕ್ಕಳೊಂದಿಗೆ ಸಂಸಾರ ಮಾಡುತ್ತಿರುವನೊಬ್ಬ ಪೊದ್ದ. ಬ್ರಹ್ಮಚಾರಿಯಾಗಿದ್ದರೆ ಗಂಡಸೇ ಅಲ್ಲ. ಕಾಫೀ ಹೋಟಲುಗಳಲ್ಲಿ ಕಾಲಿಟ್ಟರೆ ಕುಡಿಕ. ಇಲ್ಲದಿದ್ದಲ್ಲಿ ಲೋಭಿ. ಅವನಿಗೆ ಮೆದಳಿನ ಶಕ್ತಿ ಇದ್ದಲ್ಲಿ ಬುದ್ಧಿವಂತನೇ ಆಗಲಿ ಮೋಸಗಾರ. ಗುಡಿಗೆ ಹೋದರೆ ಅವನು ವೇಷಧಾರಿ ಭಕ್ತ. ಹೋಗದಿದ್ದರೆ ಪಾಪಿ ದಾತನಾದಲ್ಲಿ ಅದು ಪ್ರಚಾರದ ಸಲುವಾಗಿ. ದಾತನಲ್ಲದಿದ್ದಲ್ಲಿ ಅವನು ಪರಮ ಲೋಭಿ. ಸೀಜ. ಪ್ರಪಂಚಕ್ಕೆ ಬಂದಾಗ ಅವನನ್ನು ಪ್ರತಿಯೊಬ್ಬನೂ ಮುತ್ತಿಡುತ್ತಾನೆ. ಸಾಯುವುದಕ್ಕೆ ಮುಂಚೆ ಪ್ರತಿಯೊಬ್ಬನೂ ಅವನನ್ನು ಹೊಡೆಯಹೋಗುತ್ತಾನೆ. ಚಿಕ್ಕಂದಿನಲ್ಲಿಯೇ ಸತ್ತು ಹೋದವನಿಗೆ, ಅವನು ಸಾಯದೇ ಇದ್ದಿದ್ದಲ್ಲಿ ಭವಿಷ್ಯವು ಬಹಳ ಶೋಭಾಯಮಾನವಾಗುತ್ತಿತ್ತು. ವೃದ್ಧಾವಸ್ಥೆಯು ಬರುವರೆಗೆ ಜೀವಿಸಿಕೊಂಡಿದ್ದಲ್ಲಿ ಅವನು ಬಹುಶಃ ವೀಲುನಾಮೆಯನ್ನು ಒರೆದೇ ಇಟ್ಟಿರಬಹುದೆಂದೆಂದುಕೊಳ್ಳುತ್ತಾರೆ. .... (ಓಂ)

ಲಾಹೋರ್, ಆ ೧ — ಜಿನ್ನಾ ರವರು ಖಾಲೀ ನೆಲದ ಮೇಲೆ ಆಗಾಗಮಲಗಿಕೊಳ್ಳುತ್ತಿದ್ದಾರೆ. ಜೈಲುವಾಸದ ಕಷ್ಟಗಳಿಗೆ ತಯಾರಾಗುತ್ತಿರುವಂತಿದೆ. ಇದುವರೆವಿಗೂ ಅತ ಬಂದೀಖಾನೆ ವಾಸವನ್ನು ಅನುಭವಿಸಿಲ್ಲ.

ಲಂಡನ್, ಜು 31— ಭವಂತದ ಆಹಾರ ಪರಿನಕವಾಗಿರುವುದೆಂದು ಮಂತ್ರಿ ಮಂಡಳದ ಶ್ವೇ

ವಿಶ್ವಕರ್ನಾಟಕ ಪತ್ರಿಕೆ

ಬೆಂಗಳೂರು ಆ 2 — ಭಾರತ ರಕ್ಷಣಾ ಶಾಸನಾನ್ವಯ 'ವಿಶ್ವಕರ್ನಾಟಕ' ದೈನಿಕವು ಎರಡು ತಿಂಗಳ ಪ್ರಕಟಣೆಯಿಂದ ಪ್ರತಿಬಂಧಿಸಿದೆ. ಜುಲೈ 31 ರಲ್ಲಿ ಪ್ರಕಟವಾದ 'ಅನಾಮಧೇಯ ಪತ್ರ' ಮತ್ತು ಆಗಸ್ಟ್ 1 ರಲ್ಲಿ ಪ್ರಕಟವಾದ 'ಮಾಡಿದ್ದುಣ್ಣೋ ಮಹರಾಯ' ಎಂಬ ಅಗ್ರಲೇಖನಗಳೇ ಇದಕ್ಕೆ ಕಾರಣ. 'ಮಾಡಿದ್ದುಣ್ಣೋ ಮಹರಾಯ' ಲೇಖನದ ಪ್ರತಿಗಳು ಭಾರತ ರಕ್ಷಣಾ ಕಾನೂನಿನ ಪ್ರಕಾರ ಮುಟ್ಟುಗೋಲು ಹಾಕಿಕೊಳ್ಳಲ್ಪಟ್ಟಿದೆ.

ಮದರಾಸು, ಆ 2 — ಎಸ್ ಐ ಆರ್ ರೈಲ್ವೆ ಯೂನಿಯನ್ 26 ಕೇಳಿಕೆಗಳ ವಿನಂತಿಯನ್ನು ಜನರಲ್ ಮೇನೇಜರಿಗೆ ಕೊಟ್ಟಿದ್ದಾರೆ. ಅದರಂತೆ ಅನುಕೂಲ ಮಾಡಿಕೊಡದಿದ್ದರೆ ತಾ|| 15 ರಿಂದ 31 ರ ವರೆಗೆ ಮುಷ್ಕರಿಸಿದುವರಂತೆ.

ವಿವಿಧ ವರ್ತಮಾನ

ಬೆಂಗಳೂರು ಆ 2 — ಖಾಸಗೀ ಇಂಟರ್ ಕಾಲೇಜುಗಳಿಗೆ ತಾತ್ಕಾಲಿಕ ವಿಸ್ತಾರಣೆಯಂತೆ 2 ವರ್ಷಕ್ಕೆ ಒಂದಾವರೂ 11 ಸಾವಿರ ಸರ್ಕಾರಿ ಸಹಾಯ ದ್ರವ್ಯ ಸಿಗುವುದು.

ಲಂಡನ್ ಜು 31— ಬ್ರಿಟಿಷ್ ಸೋಲ್ಜರುಗಳು ಪರದೇಸೀ ಹೆಂಗಸರನ್ನು (ಜಪಾನೀಯರನ್ನು ಬಿಟ್ಟು) ಮದುವೆಯಾಗುವುದು ಹೇಳಲಾಗಿದೆ.

— ಇದುವರೆಗೆ 259 ನಿಮ್ಮ ನೆತ್ಯಾಗ್ರಹಿಗಳು ದಸ್ತಗಿರಿಯಾಗಿದ್ದರು. 70 ಮಂದಿ ಕ್ಷಮಾಪಣೆ ಕೇಳಿದೆ ಪ್ರಯುಕ್ತ ಬಿಡುಗಡೆ ಮಾಡಲ್ಪಟ್ಟರು.

ಮೈಸೂರು ಆ 2 — ಮೈಸೂರು ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ ಕೆ. ಚಂಗಲರಾಯ ರೆಡ್ಡಿಯವರಿಗೆ ಹೆಚ್ಚು ಓಟುಗಳು ಬಂದು ಅಧ್ಯಕ್ಷ ಪದವಿಗೇರಿದರು.



ಭಾ|| ಸೇನಾಧಿಪತಿಗೆ ಹಿಡಿಯ ಗೌರವ ಕೊಡಲಾಗುತ್ತಿದೆ.

ಸುಲಭ ಸರಕಾರ

ಎಲ್ಲೆಲ್ಲಿ ನೋಡಿದರೂ ಜವಾಬ್ದಾರಿ ಸರಕಾರ, ಗಾಷ್ಟ್ರೀಯ ಸರಕಾರ, ಆ ಸರಕಾರ, ಈ ಸರಕಾರ, ಎಂದು ಹೇಳಿ ಅಸಾಧ್ಯವಾಗಿ ಕೂಗೆಬ್ಬಿಸುತ್ತಾರೆ. ಯಾವ ಸರಕಾರವೇ ಆಗಿದ್ದರೂ ಅದು ಸುಲಭವಾಗಿರುತ್ತದೆಯೇ ಎಂಬುದನ್ನು ನೋಡಬೇಕು. ಕಮ್ಮಿ ಖರ್ಚಿನಲ್ಲಿ ನಡೆಯಬೇಕು. ಅಷ್ಟಾದರೆ ಸರಕಾ[illegible]ಕೆ ತವೆಲ್ಲಾ ಬಹು ಸುಲಭ[illegible]

ಯಾವ ಕಡೆ ಬೇಕ[illegible]ರಿ. 'ಸಂಬಳ ಹೆಚ್ಚು ಮಾಡಿ[illegible]ಭತ್ಯ ಕೊಡಿರಿ, ಬೋನಸು' ಕೊಡಿರಿ, ಹೆಚ್ಚು ದಿನ ರಜಾ ಕೊಡಿರಿ, ಕೆಲಸ ಕಮ್ಮಿ ಕೊಡಿರಿ' ಎಂದು ಎಲ್ಲೆಲ್ಲಿಯೂ ಗಲಾಟೆಗಳು. ಕೇಳಿದುದನ್ನೆಲ್ಲಾ ಕೊಡಬೇಕು ಇಲ್ಲವಾದರೆ ಮುಷ್ಕರ, ನೆರವಣಿಕೆ, ಸತ್ಯಾಗ್ರಹ, ಕೂಗು, ಗಲಾಟೆ ದೊಂಬಿ ಗುಂಡು, ಎಲ್ಲವೂ ಒಂದರ ಹಿಂದೆ ಒಂದು ನಡೆದುಹೋಗುವುದು! ಸುಲಭ ಸರಕಾರ ಮಾಡಿಬಿಟ್ಟರೆ ಇದೊಂದು ತಂಟೆಯೇ ಇಲ್ಲ.

'ಇದೇನೋ ಹೊಸ ವಿಧಾನ' ಎಂದು ಯಾರೂ ತಿಳಿದುಕೊಳ್ಳಬೇಕಾಗಿಲ್ಲ. ಹೊಸತು ಯಾವುದೂ ಇಲ್ಲ. ಎಲ್ಲಾ ಹಳೆಯದೇ. ಉತ್ತಮವಾದ ವಿಧಾನ. ಇದನ್ನು ಕಂಡುಹಿಡಿದವರು ನಮ್ಮ ಮೈಸೂರಿನವರು. ನಮ್ಮ ಸರಕಾರವೇ. ಅದು ಮೊದಲಿಗಾಗಿ ಮಾಡಿದ ವಿಧಾನ. ಚೆನ್ನಾಗಿ ನಡೆಯುತ್ತಿತ್ತು. ಆದ್ದರಿಂದಲೇ ಅದನ್ನು ಖಾಯಂ ಮಾಡಲಾಗಿದೆ. ಇತರ ಇಲಾಖೆಗಳಲ್ಲಿಯೂ ಅದನ್ನೇ ಜಾರಿಗೆ ತರಬೇಕು. ಆದರೆ ಯಾರೂ ಈವರೆಗೆ ಆ ಸೂಚನೆಯನ್ನೇ ಕೊಟ್ಟಿಲ್ಲ. ಆದ್ದರಿಂದ[illegible] ಆ ಸೂಚನೆಯನ್ನು ತಿಳಿಸ[illegible] ಇತೆಗೆ ನೀವೂ ಅದನ್ನು ತಿ[illegible]

'ಕಂದಾಯ ಮಾಫಿ[illegible]ಲು ಕೊಡಿ' 'ಆಸ್ಪತ್ರೆ[illegible]ಟ್ಟೆ ಮಾಡಿ ಕೊಡಿ

ಬಹು ಸುಲಭವಿದೆ. ಆಯುರ್ವೇದ ಪಂಡಿತರೊಬ್ಬರಿಗೆ ತಿಂಗಳಿಗೆ ಮೂವತ್ತು ನಲವತ್ತು ರೂಪ್ಯಾಗಳನ್ನ ಕೊಟ್ಟರಾಯಿತು. ಆ ಊರಿನ ಜನಗಳ ಆರೋಗ್ಯ ರಕ್ಷಣಾ ಕಾರ್ಯವನ್ನೆಲ್ಲಾ ಆತನೇ ಹಿಸಿಕೊಳ್ಳುತ್ತಾನೆ- ಮೂಲಿಕೆಗ[illegible] ತರುವುದು, ಔಷಧಗಳನ್ನು ತ[illegible] ವುದು, ರೋಗಿಗಳನ್ನು ಉಪಚರಿಸುವು[illegible] ಅವರಿಗೆ ಚಿಕಿತ್ಸೆ ಮಾಡುವುದು, ಇತ್ಯಾದಿ ಎಲ್ಲಾ ಅಧಿಕಾರಗಳೂ ಆತನ ಹಕ್ಕಿನ ದಾಗಿರುತ್ತವೆ. ದಿವಾನಗಿರಿಯಿಂದ ಹಿಡಿದು ಡಾಕ್ಟರ್ ಸಾಹೇಬ್ ಗಿರಿವರಗಿನ ಎಲ್ಲ ಅಧಿಕಾರಗಳೂ ಅವರಿಗೇನೇ ಸೇರಿರುತ್ತವೆ, ಇಂಥಾ ಒಂದು ಸರ್ವಾಧಿಕಾರ ಪಟ್ಟವನ್ನೇ ಆ ಪಂಡಿತರಿಗೆ ನಮ್ಮ ಸರಕಾರದವರು ಕೊಟ್ಟಿರುತ್ತಾರೆ.

ಸುಲಭ ಸರಕಾರ ರಚನಾ ವಿಧಾನ ಸೂತ್ರಗಳಲ್ಲಿ ನಮ್ಮ ಸರಕಾರವು ಮಾದರಿಗಾಗಿ ಆಚರಣೆಗೆ ತಂದು ಯಶಸ್ವಿಯಾಗಿ ನಡೆಸಿಕೊಂಡು ಬಂದುದಿದು.

ಇತರ ಇಲಾಖೆಗಳಲ್ಲಿ ಈ ಸೂತ್ರದಂತೆ ಆಚರಣೆಗೆ ತರುವ ಸಲಹೆಗಳನ್ನು ನಾಳೆ ನೋಡಿರಿ. ('ಮ[illegible]

ಟಿ. ಎ. ಮಧ[illegible]

ಟಿ ಎ. ಮಧುರವ[illegible] ಪಿಕ್ಚರ್ಸ್‌ರವರ 'ದೇವ[illegible] ಲ್ಲಿ ಅಭಿನಯಿಸುವಳೆಂದು ಈ[illegible] ಪ್ರಕಟವಾಗಿತ್ತಷ್ಟೆ. ಪಕ್ಕಿರಾಜ್‌ದವ[illegible] ಡ 'ಕನ್ನಿಕಾ' ಇತರ ಎರಡು ಚಿತ್ರಗಳಲ್ಲಿ ಆಕೆ ಅಭಿನಯಿಸುವಳೆಂದು ಇದೀಗ ಗೊತ್ತಾಗಿದೆ. ಟಿ. ಎ. ಮಧುರಂ ವು ನಃ ಚಲಚಿತ್ರಗಳಲ್ಲಿ ಅಭಿನಯಿಸಲು ಕಾರಣವಾದ ವಿಷಯವೆಂದರೆ, ಮದ್ರಾಸು ಹೈಕೋರ್ಟಿನಲ್ಲಾದ ಎ. ಎಸ್. ಕೃಷ್ಣರವರ ಮೇಲಿನ ಖೂನಿ ಮೊಕ[illegible]ಯ ತೀರ್ಮಾನದ ಕುರಿತು ಪ್ರೀ[illegible]ಸ್ಸಿನಲ್ಲಿ ಅಪೀಲಿಗೆ ಸಮ್ಮತಿ [illegible]ರೆತಿದೆಯಷ್ಟೆ-ಅದಕ್ಕೆ ಬೇಕಾಗುವ [illegible]ನ ಹಣ ಸಂಗ್ರಹಿಸುವದೆ[illegible]ಮಧು[illegible] ಚಲಚಿತ್ರ ಸೇವೆಗೆ ಇಳಿದುದಾ

(ಪ್ರ)

[illegible]ರು ಜು 29 — ಗಣಿ ಕಂ[illegible]ಗೆ ಮೊದಲು 5 ತಿಂಗಳಿಗೆ 12 [illegible] ಪರಿಹಾರ ಸಮಿತಿ ಕೊಡಲು [illegible]ದೆ.

[illegible] ಜು 29 — ಬ್ರಿಟಿಷ್ ಮ[illegible]ಗಳಲ್ಲಿ ಪೋಟಾ ನೋ[illegible]ಳಿ ವಿಪರೀತವಾಗಿದೆ. ಇ[illegible]ಯಾರಾಗುವುದೆಂಬುದನ್ನು [illegible] ಸರಕಾರಗಳು ಪ್ರ

ಅತ್ಯಾಚಾರಿಗಳ ಪತ್ತೆಗಾಗಿ

ಜರೂಸೆಲಂ ಜು 30 - ಪ್ಯಾಲಿಸ್ಟೈನ್ ಸರಕಾರದ ಕೇಂದ್ರ ಕಛೇರಿಗಳನ್ನು ಬಾಂಬಿನಿಂದ ಉಡಾಯಿಸಿದ ಪ್ರಕರಣ ಸಂಬಂಧದಲ್ಲಿ, ಟೆಲ್‌ಅವೀವಿನ ಒಂದು [illegible]ಟಲಿನಲ್ಲಿ 143 ಮಂದಿ ಯಹೂದ್ಯ[illegible] ಬಂಧಿಸಲ್ಪಟ್ಟಿದ್ದಾರೆ. ಈ ಪೈಕಿ 10 ಮಂದಿ ಸ್ತ್ರೀಯರು. ಜರೂಸಲಂನಲ್ಲಿ ನಡೆದ ಈ ಭಾರಿ ಅತ್ಯಾಚಾರಕ್ಕೆ ಸಂಬಂಧಿಸಿದವರೆಲ್ಲರನ್ನೂ ಹಿಡಿದುಹಾಕಲು 16000 ಸೈನಿಕರು ಮುನ್ನುಗ್ಗಿದ್ದಾರೆ.

ಮದ್ಯಪಾನ ನಿರೋಧ

ಮದರಾಸು ಜು 31 — ಮದ್ಯಪಾನ ನಿರೋಧವು ಪ್ರಾಂತದಲ್ಲೆಲ್ಲಾ ಜಿಲ್ಲೆಗ[illegible] ವರ್ಷಗಳೊಳಗೆ ಜಾರಿಗೆ [illegible] ಶಾಸನ ಸಭೆಯಲ್ಲಿ [illegible]ವರು ಹೇಳಿದರು.

[illegible]ನ ಸಂಕಟ

[illegible]ವು ಯೂನಿಯನ್ ಜಾ[illegible] ಕಿಗೆ [illegible]ನ್ನದೇ ಅದ ಪ್ರತ್ಯೇಕ [illegible] ಪತಾಕವ[illegible] ಪಯೋಗಿಸಲು ಯೋ[illegible] ಕೆಸರಾ ಆಹಾರವನ್ನು [illegible] ಇಂಗ್ಲೆಂಡಿನಲ್ಲಿ [illegible] ಆದುದರಿಂದ [illegible] ಯದಲ್ಲಿ ಯಾ[illegible] ಕ್ಷೇಪಣೆ ಮಾಡ

ಅಕ್ಕಿ ರೇಷನ್ ಇಳಿತಾಯ

ಮದರಾಸು ಜು 31 — ಅಕ್ಕಿ ರೇಷನ್ 8 ಔನ್ಸಿಗೆ ಇಳಿಸಲ್ಪಟ್ಟು, ಮಿಕ್ಕ 4 ಔನ್ಸ್ ಗೋಧಿ ಅಥವಾ ಬೇರೆ ಧಾನ್ಯ ಕೊಡುವ ವಿಷಯವನ್ನು ಅಸೆಂಬ್ಲಿಯಲ್ಲಿ ಮುಖ್ಯ ಮಂತ್ರಿಗಳು ವಿವರಿಸಿದರು.

300 ಮಂದಿ ನೀರಿನ ಪಾಲು

ಇಸ್ತಂಬಾಲ್ ಜು 30 — ಅಂಟೋನಿಯರ್ ಡಿಸ್ಟ್ರಕ್ಟಿನಲ್ಲಾದ ನೆರಹಾವಳಿಯಿಂದ 300 ಮಂದಿ ಸತ್ತು ಅನೇಕರು ನಿರಾಶ್ರಿತರಾದರು.

ಲಂಡನ್ ಜು 31 — ಪ್ರಿವಿಕೌನ್ಸಿಲ್ಲಿನಲ್ಲಿಯೂ ಬೂವಾಲ್ ಸನ್ಯಾಸಿ ಸಂಬಂಧದ ಮೊಖದ್ದಮೆ ಅವನ ಅನುಕೂಲವಾಗಿ ತೀರ್ಮಾನವಾಯಿತು.

ಪ್ಯಾರಿಸ್ ಜು 30 — ಶಾಂತಿ ಕರಾರಿನಂತೆ ಇಟಲಿ ರಷ್ಯಾಕ್ಕೆ ಯುದ್ಧ ಪರಿಹಾರಕ್ಕಾಗಿ ರೂ 33,30,00000 ಕೊಡತಕ್ಕದ್ದಾಗಿದೆ. ಮಿಕ್ಕ ಪರತ್ತುಗಳ ವಿವರ ನಾಳೆ ಪ್ರಕಟಿಸಲಾಗುತ್ತೆ.

ವಾಷಿಂಗ್‌ಟನ್ ಜು 30 — ನ್ಯಾಯ ವಿಚಾರಣೆಯಿಲ್ಲದೆ ಬಿಳೀ ಜನರೇ ಮುನ್ನುಗ್ಗಿ ತಪ್ಪಿತಸ್ಥರನ್ನು ಹಿಂಸಿಸುವದನ್ನು ಪ್ರತಿಭಟಿಸಲು ನೀಗ್ರೋ ಜನರು ವೈ॥ ಟ್ರೂಮನ್ನರ ವೈಟ್ ಹೌಸ್ ಮುಂದೆ ಪಿಕೆಟ್ ನಡೆಸಿದರು.